<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ದಕ್ಷಿಣ ಕನ್ನಡ, ಮಂಗಳೂರು.</u>

**<u>ಸೆಷನ್ಸ್ ಕೇಸ್ ನಂಬ್ರ 61/2024</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಿಯಾಜ್ | <u>ಪ್ರಾಸಾಃ 5</u> |
| ತಂದೆಯ ಹೆಸರು | : | ಲೇಟ್ ಯುಸುಫ್ | <u>ಚಾಸಾಃ 6</u> |
| ಪ್ರಾಯ | : | 47 ವರ್ಷ | **<u>ದಿನಾಂಕಃ 08.10.2025</u>** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ವಿದೇಶದಲ್ಲಿ ಉದ್ಯೋಗ | |
| ವಾಸಸ್ಥಳ | : | ನಾವುಂದ, ಕುಂದಾಪುರ | |

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

1998 ರಲ್ಲಿ ನಾನು ಮಂಗಳೂರಿನಲ್ಲಿರುವ ಟೈರ್ ಕ್ಲಿನಿಕ್ ಎಂಬ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆ. ಮೃತ ಮೊಯ್ದಿನ್ ಬೆದ್ರು ನನ್ನ ಅಕ್ಕನ ಗಂಡ. ಅವರು ಜೀವಂತ ಇರುವಾಗ ಬೈಕಂಪಾಡಿಯ ಇಂಡಸ್ಟ್ರೀಯಲ್ ಎರಿಯಾದಲ್ಲಿ ಫ್ಯಾಕ್ಟರಿ ನಡೆಸುತ್ತಿದ್ದರು.

2. ದಿನಾಂಕ 31.12.1998 ರಂದು ಬೆಳಗ್ಗೆ 10.30 ಗಂಟೆಗೆ ಮಂಗಳೂರು ಉಡುಪಿ ರಾಷ್ಟ್ರೀಯ ಹೆದ್ದಾರಿಯ ಬಳಿ ಇರುವ ಬೈಕಂಪಾಡಿ ಕುಳಾಯಿ ಮದ್ಯೆ ಇರುವ ಚಿತ್ರಾಪುರ ಹೊಸಬೆಟ್ಟು ಎಂಬಲ್ಲಿ ಮೊಯ್ದಿನ್ ಬೆದ್ರು ರವರ ಮೇಲೆ 15-20 ಜನರ ಗುಂಪು ಹಲ್ಲೆ ಮಾಡಿದ್ದು, ಅವರು ಮಂಗಳೂರಿನ ಎಸ್.ಸಿ.ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿರುವ ಬಗ್ಗೆ ಮಾಹಿತಿ ನನಗೆ ಬಂದಿರುತ್ತದೆ. ಈ ಘಟನೆಯ ಸಂಬಂಧ ಪೋಲಿಸರು ನನ್ನನ್ನು ಆಸ್ಪತ್ರೆಗೆ ಕರೆದಿರುತ್ತಾರೆ. ದಿನಾಂಕ 01.01.1999 ರಂದು ರಾತ್ರಿ 12.00 ಗಂಟೆಯ ಸಮಯದಲ್ಲಿ ಮೊಯ್ದಿನ್ ಬೆದ್ರು ರವರು ಸದರಿ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ. ಆಸ್ಪತ್ರೆಯಲ್ಲಿ ಪೋಲಿಸರು

ಮೃತ ಪಟ್ಟ ಬಗ್ಗೆ ದೃಡ ಪಡಿಸಿರುತ್ತಾರೆ. ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

3. ದಿನಾಂಕ 24.03.1999 ರಂದು ಸಿ.ಐ.ಡಿ ಪೋಲಿಸರು ನನ್ನನ್ನು ಘಟನೆಯಾದ ಸ್ಥಳಕ್ಕೆ ಕರೆದಿದ್ದು, ಅಲ್ಲಿ ಸ್ಥಳದಿಂದ ರಕ್ತ ಸಿಕ್ತ ಮಣ್ಣನ್ನು ತೆಗೆದು, ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಸೀಲು ಮಾಡಿರುತ್ತಾರೆ. ಅದೇ ರೀತಿ ಸುಟ್ಟು ಹೋದ ಮೊಯ್ದಿನ್ ಬೆದ್ರ ರವರಿಗೆ ಸೇರಿದ ಬಜಾಜ್ ಸ್ಕೂಟರನ್ನು ಸ್ಥಳದಿಂದ ವಶಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ಸ್ಥಳದಲ್ಲಿ ತಯಾರಿಸಿದ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ನನ್ನ ಜೊತೆ ಚಾಸಾ-8 ರವರು ಸಹಿ ಹಾಕಿರುತ್ತಾರೆ. ಸಾಕ್ಷಿ ಗುರುತಿಸಿದ ಸದರಿ ಮಹಜರಿನ ಪ್ರತಿಯನ್ನು **ನಿಪಿ-5** ಎಂದು ಗುರುತಿಸಲಾಯಿತು.

4. ನಂತರ ಪೋಲಿಸರು ನನ್ನನ್ನು ಚಿತ್ರಾಪುರ ದೇವಸ್ಥಾನದ ರಸ್ತೆಗೆ ಕರೆದುಕೊಂಡು ಹೋಗಿ ಅಲ್ಲಿ ಪೊದೆಯಿಂದ ಒಂದು ತಲವಾರನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ತಲವಾರನ್ನು ಒಬ್ಬ ಆರೋಪಿಯು ತೋರಿಸಿಕೊಟ್ಟಿದ್ದು, ಆತನ ಹೆಸರು ನನಗೆ ಈಗ ನೆನಪಿಲ್ಲ. ಸದರಿ ಸ್ಥಳದಲ್ಲಿ ಒಂದು ದಾಖಲೆಯನ್ನು ತಯಾರಿಸಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ದಾಖಲೆ ಮಹಜರು ಆಗಿದ್ದು, ಸದರಿ ಮಹಜರಿನ ಪ್ರತಿಯನ್ನು **ನಿಪಿ-6** ಎಂದು ಗುರುತಿಸಲಾಯಿತು. ಸದರಿ ತಲವಾರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ಈ ಪ್ರಕರಣದಲ್ಲಿ ಹಾಜರುಪಡಿಸಿದ ತಲವಾರನ್ನು ತೋರಿಸಲಾಗಿ, ತನಗೆ ಸರಿಯಾಗಿ ಗುರುತಿಸಲು ಆಗುವುದಿಲ್ಲ ಎಂದು

ನುಡಿಯುತ್ತಾರೆ. ಸದರಿ ತಲವಾರನ್ನು **ಎಂ.ಒ-1** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ನ್ಯಾಯಾಲಯದ ಮುಂದಿರುವ ಕಡತ ಮತ್ತು ಸಾಕ್ಷಿಯ ಹೇಳಿಕೆಗಳನ್ನು ಗಮನಿಸಿ, ಸರಕಾರಿ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ. )**

**<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

5. ಮೊಯ್ದಿನ್ ಬೆದ್ರು ರವರ ಮೇಲೆ ದಿನಾಂಕ 30.12.1998 ರಂದು ಹಲ್ಲೆ ಯಾಗಿರುತ್ತದೆ ಎಂದರೆ ಪ್ರಕರಣ ತುಂಬಾ ಹಳೆಯದಾಗಿರುವ ಕಾರಣ ನನಗೆ ನೆನಪಿಲ್ಲ. ದಿನಾಂಕ 01.01.1999 ರಂದು ಘಟನಾ ಸ್ಥಳದಲ್ಲಿ ನಿಪಿ-5 ನ್ನು ತಯಾರಿಸಲಾಗಿರುತ್ತದೆ ಎಂದರೆ ನನಗೆ ನೆನಪಿಲ್ಲ. ಆರೋಪಿ ಹರೀಶ್ ಕಾಂಚನ್ ರವರು ನಿಪಿ-6 ನ್ನು ವಶಪಡಿಸಿಕೊಂಡ ತಲವಾರನ್ನು ತೋರಿಸಿರುತ್ತಾರೆ ಎಂದರೆ ನೆನಪಿಲ್ಲ. ನನ್ನ ಸಮಕ್ಷಮದಲ್ಲಿ ಪೋಲಿಸರು ಎಂ.ಒ-1 ನ್ನು ವಶಪಡಿಸಿರುತ್ತಾರೆ ಎಂದರೆ ನನಗೆ ಸರಿಯಾಗಿ ನೆನಪಿಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ.ಕೆ.ಡಿ.ಎಸ್ ವಕೀಲರಿಂದಃ</u>**

6. ನಾನು 1998 ರಲ್ಲಿ ನನ್ನ ಭಾವನ ಮನೆಯಲ್ಲಿ ಇದ್ದು, ಮಂಗಳೂರಿನ ಟೈರ್ ಕ್ಲಿನಿಕ್ ಎಂಬ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಯಾವುದೇ ಸ್ಥಳ ಮಹಜರಿಗೆ ಹೋಗಿರುವುದಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಸ್ವತ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಮತ್ತು ಠಾಣೆಯಲ್ಲಿ ಮಹಜರಿಗೆ ಸಹಿ ಹಾಕಲಾಗಿದೆ

ಎಂದರೆ ನನಗೆ ಸರಿಯಾಗಿ ನೆನಪಿಲ್ಲ. ನನ್ನ ಸಮಕ್ಷಮ ಯಾವುದೇ ಆಯುಧವನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ನನಗೆ ಸರಿಯಾಗಿ ನೆನಪಿಲ್ಲ. ಮೃತನು ನನ್ನ ಭಾವ ಆಗಿರುವ ಕಾರಣ, ನನ್ನ ಸಮಕ್ಷಮ ಯಾವುದೇ ಮಹಜರು ತಯಾರಿಸದೇ ಇದ್ದರೂ ಸದರಿ ಸ್ಥಳದಲ್ಲಿ ಇದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.